**All India Radio: Bangalore**
**National Bulletins In Kannada**
**07.08.2025 / 7.35 am**
**ಆಕಾಶವಾಣಿ, ಬೆಂಗಳೂರು**
**ರಾಷ್ಟ್ರೀಯ ವಾರ್ತೆಗಳು**
**07.08.2025 / 7.35 am**
**<><*<><>*><>**
**ಮುಖ್ಯಾಂಶಗಳು**

**ಮುಖ್ಯಾಂಶಗಳು**

**೧. ರಾಷ್ಟ್ರಪತಿಗಳಿಂದ ಇಂದು ಸಂತ ಕಬೀರ ಕೈಮಗ್ಗ ಪ್ರಶಸ್ತಿ, ರಾಷ್ಟ್ರೀಯ ಕೈಮಗ್ಗ ಪ್ರಶಸ್ತಿ ಪ್ರದಾನ**

**೨. ನವದೆಹಲಿಯಲ್ಲಿಂದು ಎಂ.ಎಸ್.ಸ್ವಾಮಿನಾಥನ್ ಶತಮಾನೋತ್ಸವ ಸಮ್ಮೇಳನಕ್ಕೆ ಪ್ರಧಾನಿ ಚಾಲನೆ**

**೩. ಮಾಸ್ಕೋದಲ್ಲಿ ರಷ್ಯಾದ ಹಿರಿಯ ಅಧಿಕಾರಿಗಳೊಂದಿಗೆ ಇಂದು ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ದೋವಲ್ ಸಭೆ**

**೪. ವೈಸ್ಲಾವ್ ಮನಿಯಾಕ್ ಕ್ರೀಡಾಕೂಟ: ಮಹಿಳೆಯರ ಜಾವೆಲಿನ್ ಎಸೆತದಲ್ಲಿ ಭಾರತದ ಅನ್ನು ರಾಣಿಗೆ ಚಿನ್ನ**

**><><><><><><><><><**

**ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ನವದೆಹಲಿಯಲ್ಲಿ ಇಂದು ನಡೆಯಲಿರುವ ೧೧ನೇ ರಾಷ್ಟ್ರೀಯ ಕೈಮಗ್ಗ ದಿನಾಚರಣೆಯ ಅಧ್ಯಕ್ಷತೆ ವಹಿಸಲಿದ್ದಾರೆ. ಜವಳಿ ಸಚಿವಾಲಯ ಆಯೋಜಿಸಿರುವ ಈ ಕಾರ್ಯಕ್ರಮವು ಭಾರತದ ಕೈಮಗ್ಗ ವಲಯ ಹಾಗೂ ದೇಶದ ಗ್ರಾಮೀಣ ಆರ್ಥಿಕತೆ ಮತ್ತು ಸಾಂಸ್ಕೃತಿಕ ಹಿರಿಮೆಗೆ ಅದರ ಕೊಡುಗೆಯನ್ನು ಗೌರವಿಸುವ ಗುರಿಯನ್ನು ಹೊಂದಿದೆ. ದೇಶಾದ್ಯಂತದ ಸುಮಾರು ೬೫೦ ನೇಕಾರರು, ವಿದೇಶಿ ಖರೀದಿದಾರರು, ರಫ್ತುದಾರರು, ಕೇಂದ್ರ ಜವಳಿ ಸಚಿವ ಗಿರಿರಾಜ್ ಸಿಂಗ್, ಕೇಂದ್ರ ಜವಳಿ ಖಾತೆ ರಾಜ್ಯ ಸಚಿವೆ ಪಬಿತ್ರಾ ಮಾರ್ಗರಿಟಾ ಸಮಾರಂಭದಲ್ಲಿ ಭಾಗವಹಿಸಲಿದ್ದಾರೆ. ಈ ಸಂದರ್ಭದಲ್ಲಿ ಕ್ಷೇತ್ರದ ಬೆಳವಣಿಗೆಗೆ ಗಣನೀಯ ಕೊಡುಗೆ**

ನೀಡಿದ ಅತ್ಯುತ್ತಮ ನೇಕಾರರಿಗೆ ಸಂತ ಕಬೀರ ಕೈಮಗ್ಗ ಪ್ರಶಸ್ತಿ ಮತ್ತು ರಾಷ್ಟ್ರೀಯ ಕೈಮಗ್ಗ ಪ್ರಶಸ್ತಿಯನ್ನು ರಾಷ್ಟ್ರಪತಿಗಳು ಪ್ರದಾನ ಮಾಡಲಿದ್ದಾರೆ. ಸಂತ ಕಬೀರ ಪ್ರಶಸ್ತಿಯು ೩ ಲಕ್ಷ ೫೦ ಸಾವಿರ ರೂಪಾಯಿ ನಗದು ಬಹುಮಾನವನ್ನು ಹೊಂದಿದ್ದರೆ, ರಾಷ್ಟ್ರೀಯ ಕೈಮಗ್ಗ ಪ್ರಶಸ್ತಿಯು ೨ ಲಕ್ಷ ರೂಪಾಯಿ ನಗದು ಬಹುಮಾನವನ್ನು ಹೊಂದಿದೆ.

><><><><><><><><><

ನವದೆಹಲಿಯ ಐಸಿಎಆರ್ ಪುಸಾದಲ್ಲಿ ಇಂದು ಎಂ.ಎಸ್.ಸ್ವಾಮಿನಾಥನ್ ಶತಮಾನೋತ್ಸವ ಸಮ್ಮೇಳನವನ್ನು ಪ್ರಧಾನಿ ನರೇಂದ್ರ ಮೋದಿ ಉದ್ಘಾಟಿಸಲಿದ್ದಾರೆ. ಈ ಸಂದರ್ಭದಲ್ಲಿ, ಎಂ.ಎಸ್. ಸ್ವಾಮಿನಾಥನ್ ಆಹಾರ ಮತ್ತು ಶಾಂತಿ ಪ್ರಶಸ್ತಿಯನ್ನು ಪ್ರದಾನ ಮಾಡಲಿದ್ದಾರೆ. ಎಂ.ಎಸ್.ಸ್ವಾಮಿನಾಥನ್ ಅವರ ಪರಂಪರೆಯನ್ನು ಗೌರವಿಸಲು ಎಂ.ಎಸ್.ಸ್ವಾಮಿನಾಥನ್ ಸಂಶೋಧನಾ ಪ್ರತಿಷ್ಠಾನ ಮತ್ತು ವಿಶ್ವ ವಿಜ್ಞಾನ ಅಕಾಡೆಮಿ ಈ ಪ್ರಶಸ್ತಿಯನ್ನು ಪ್ರಾರಂಭಿಸುತ್ತಿವೆ. ಈ ಅಂತಾರಾಷ್ಟ್ರೀಯ ಪ್ರಶಸ್ತಿಯು ಆಹಾರ ಭದ್ರತೆ ಸುಧಾರಿಸಲು ಮತ್ತು ದುರ್ಬಲ ಹಾಗೂ ಅಂಚಿನಲ್ಲಿರುವ ಸಮುದಾಯಗಳಿಗೆ ಹವಾಮಾನ, ನ್ಯಾಯ, ಸಮಾನತೆ ಮತ್ತು ಶಾಂತಿಯನ್ನು ಮುನ್ನಡೆಸಲು ಕೊಡುಗೆ ನೀಡಿದ ಅಭಿವೃದ್ಧಿಶೀಲ ರಾಷ್ಟ್ರಗಳ ವ್ಯಕ್ತಿಗಳನ್ನು ಗುರುತಿಸುತ್ತದೆ.

><><><><><><><><><

ಈ ವರ್ಷದ ಮಾರ್ಚ್ ವರೆಗೆ ಈಶಾನ್ಯ ಭಾರತದಲ್ಲಿ ಒಟ್ಟು ೨೭೮ ಕಿಲೋಮೀಟರ್ ಉದ್ದದ ರೈಲು ಮಾರ್ಗಗಳನ್ನು ಕಾರ್ಯಾರಂಭ ಮಾಡಲಾಗಿದ್ದು, ಇದಕ್ಕಾಗಿ ೪೧ ಸಾವಿರದ ೬೭೬ ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ ಎಂದು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಲೋಕಸಭೆಗೆ ನೀಡಿದ ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ. ಈಶಾನ್ಯ ಭಾರತದಲ್ಲಿ ರೈಲು ಜಾಲದ ಮಾರ್ಗ ಸಾಮರ್ಥ್ಯವನ್ನು ಹೆಚ್ಚಿಸಲು ಒಟ್ಟು ೭೭೭ ಕಿಲೋಮೀಟರ್ ಉದ್ದದ ೧೨ ರೈಲ್ವೆ ಯೋಜನೆಗಳನ್ನು ಮಂಜೂರು ಮಾಡಲಾಗಿದೆ ಎಂದು ಅವರು ಹೇಳಿದರು. ಈಗಾಗಲೇ ಕಾರ್ಯಾರಂಭ ಮಾಡಿದ ಯೋಜನೆಗಳಲ್ಲಿ ಬೋಗಿಬೀಲ್ ಸೇತುವೆ, ಅಗರ್ತಲಾ-ಸಬ್ರೂಮ್ ಹೊಸ ಮಾರ್ಗ, ಲುಮ್ಡಿಂಗ್-ಹೊಜೈ ಮತ್ತು ನ್ಯೂ ಬೊಂಗೈಗಾಂವ್-ಅಗ್ಥೋರಿ ದ್ವಿಪಥ ಯೋಜನೆ ಸೇರಿವೆ. ಕಳೆದ ಮೂರು ವರ್ಷಗಳಲ್ಲಿ ಪ್ರಧಾನಮಂತ್ರಿ ಗತಿ ಶಕ್ತಿ ರಾಷ್ಟ್ರೀಯ ಮಾಸ್ಟರ್ ಪ್ಲಾನ್ ಅಡಿಯಲ್ಲಿ ೧೩ ಹೊಸ

ಮಾರ್ಗಗಳು ಮತ್ತು ಈಶಾನ್ಯ ಭಾರತದಲ್ಲಿ ಒಟ್ಟು ಒಂದು ಸಾವಿರದ ೭೯೦ ಕಿಲೋಮೀಟರ್ ಉದ್ದದ ೪ ದ್ವಿಪಥ ಯೋಜನೆಗಳನ್ನು ಮಂಜೂರು ಮಾಡಲಾಗಿದೆ ಎಂದು ಸಚಿವರು ತಿಳಿಸಿದರು.

><><><><><><><><

ಭಾರತದ ಆಮದುಗಳ ಮೇಲೆ ಹೆಚ್ಚುವರಿಯಾಗಿ ಶೇಕಡ ೨೫ ರಷ್ಟು ಸುಂಕ ವಿಧಿಸುವ ಅಮೆರಿಕದ ನಿರ್ಧಾರವನ್ನು ಜಾಗತಿಕ ವ್ಯಾಪಾರ ಸಂಶೋಧನಾ ಸಂಸ್ಥೆ- ಉಖಿಖI ಟೀಕಿಸಿದೆ. ಆಗಸ್ಟ್ ೨೭ ರಿಂದ ಜಾರಿಗೆ ಬರುವಂತೆ ಭಾರತೀಯ ಸರಕುಗಳ ಮೇಲೆ ಶೇಕಡ ೨೫ ರಷ್ಟು ಹೊಸ ಸುಂಕ ವಿಧಿಸುವುದಾಗಿ ಅಮೆರಿಕ ಘೋಷಿಸಿದ ನಂತರ ಈ ಟೀಕೆ ಬಂದಿದೆ. ಇದರೊಂದಿಗೆ ಒಟ್ಟು ಸುಂಕವನ್ನು ಶೇಕಡ ೫೦ ಕ್ಕೆ ಹೆಚ್ಚಿಸಲಾಗಿದೆ.೨೦೨೪ ರಲ್ಲಿ ಚೀನಾ ೬೨.೬ ಶತಕೋಟಿ ಡಾಲರ್ ಮೌಲ್ಯದ ರಷ್ಯಾದ ತೈಲವನ್ನು ಆಮದು ಮಾಡಿಕೊಂಡಿದೆ ಎಂದು ಉಖಿಖI ಉಲ್ಲೇಖಿಸಿದ್ದು, ಇದು ಭಾರತದ ೫೨.೭ ಶತಕೋಟಿ ಡಾಲರ್ ಮೌಲ್ಯದ ರಷ್ಯಾದ ತೈಲ ಆಮದನ್ನು ಮೀರಿದೆ. ಇದರ ಹೊರತಾಗಿಯೂ, ಚೀನಾ ಯಾವುದೇ ದಂಡನಾತ್ಮಕ ಸುಂಕಗಳನ್ನು ಎದುರಿಸಿಲ್ಲ. ೨೦೨೪ ರಲ್ಲಿ ರಷ್ಯಾದಿಂದ ಯುರೋಪಿಯನ್ ಒಕ್ಕೂಟದ ೩೯.೧ ಶತಕೋಟಿ ಡಾಲರ್ ಆಮದುಗಳನ್ನು ಅಮೆರಿಕ ನಿರ್ಲಕ್ಷಿಸಿದೆ ಎಂದು ಸಂಸ್ಥೆ ತಿಳಿಸಿದೆ. ಇದೇ ಅವಧಿಯಲ್ಲಿ ಅಮೆರಿಕ ಸ್ವತಃ ರಷ್ಯಾದಿಂದ ೩.೩ ಶತಕೋಟಿ ಡಾಲರ್ ಮೌಲ್ಯದ ಕಾರ್ಯತಂತ್ರದ ವಸ್ತುಗಳನ್ನು ಆಮದು ಮಾಡಿಕೊಂಡಿದೆ ಎಂದು ಉಖಿಖI ಬಹಿರಂಗಪಡಿಸಿದೆ.

><><><><><><><><

ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ದೋವಲ್ ಅವರು ಇಂದು ಮಾಸ್ಕೋದಲ್ಲಿ ರಷ್ಯಾದ ಹಿರಿಯ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಭಾರತ-ರಷ್ಯಾ ರಕ್ಷಣಾ ಮತ್ತು ಭದ್ರತಾ ಸಹಕಾರದ ಬಗ್ಗೆ ಚರ್ಚಿಸಲಿದ್ದಾರೆ.ಭಾರತದ ಸರಕುಗಳ ಮೇಲಿನ ಶೇಕಡ ೨೫ ರಷ್ಟು ಸುಂಕ ಹೆಚ್ಚಳವನ್ನು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಘೋಷಿಸಿರುವ ಸಮಯದಲ್ಲಿ ಈ ಭೇಟಿ ಮಹತ್ವದ್ದಾಗಿದೆ.ಮಾಸ್ಕೋ ಭೇಟಿಯ ಸಮಯದಲ್ಲಿ, ಅಜಿತ್ ದೋವಲ್ ತೈಲ ವಿಷಯ ಮತ್ತು ಮುಂಬರುವ ಪ್ರಧಾನಿ ನರೇಂದ್ರ ಮೋದಿ ಹಾಗೂ ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರ ಜೊತೆ ಶೃಂಗಸಭೆಯ ಬಗ್ಗೆಯೂ ಮಾತುಕತೆ ನಡೆಸಲಿದ್ದಾರೆ.

><><><><><><><><><

ಕೈಲಾಸ-ಮಾನಸ ಸರೋವರ ಯಾತ್ರಿಕರ ನಾಲ್ಕನೇ ತಂಡವು ಉತ್ತರಾಖಂಡದ ಪಿಥೋರಗಢ ಜಿಲ್ಲೆಯ ಧಾರ್ಚುಲಾ ಮೂಲ ಶಿಬಿರದಲ್ಲೇ ಉಳಿಯುವಂತಾಗಿದೆ. ಪ್ರತೀಕೂಲ ಹವಾಮಾನದಿಂದಾಗಿ ಎತ್ತರದ ಸ್ಥಳಕ್ಕೆ ಹೋಗುವ ರಸ್ತೆಗೆ ಭಾರೀ ಬಂಡೆಗಳು ಅಪ್ಪಳಿಸಿದ್ದರಿಂದ ಮುಂದಕ್ಕೆ ಹೋಗದಂತೆ ತಂಡವನ್ನು ತಡೆಹಿಡಿಯಲಾಗಿದೆ. ಈ ತಂಡವು ದೇಶದ ವಿವಿಧ ಭಾಗಗಳಿಂದ ಬಂದ ೧೪ ಮಹಿಳೆಯರು ಸೇರಿದಂತೆ ೪೮ ಯಾತ್ರಿಕರನ್ನು ಒಳಗೊಂಡಿದೆ.ವಿದೇಶಾಂಗ ಸಚಿವಾಲಯ ಆಯೋಜಿಸಿರುವ ಕೈಲಾಸ ಮಾನಸ ಸರೋವರ ಯಾತ್ರೆ ಜೂನ್‌ನಲ್ಲಿ ಪ್ರಾರಂಭವಾಗಿತ್ತು ಮತ್ತು ಆಗಸ್ಟ್‌ನಲ್ಲಿ ಕೊನೆಗೊಳ್ಳುತ್ತದೆ. ೫೦ ಯಾತ್ರಿಗಳನ್ನು ಒಳಗೊಂಡ ತಲಾ ಐದು ತಂಡಗಳನ್ನು ಲಿಪುಲೇಖ್ ಪಾಸ್ ದಾಟಿ ಉತ್ತರಾಖಂಡದ ಮೂಲಕ ಪ್ರಯಾಣಿಸಲು ಕೇಂದ್ರವು ಅನುಮತಿ ನೀಡಿದೆ.

><><><><><><><><><

ಪೋಲೆಂಡ್‌ನಲ್ಲಿ ನಡೆದ ಅಂತಾರಾಷ್ಟ್ರೀಯ ವೈಸ್ಲಾವ್ ಮನಿಯಾಕ್ ಸ್ಮಾರಕ ಅಥ್ಲೆಟಿಕ್ಸ್ ಕ್ರೀಡಾಕೂಟದ ಮಹಿಳೆಯರ ಜಾವೆಲಿನ್ ಎಸೆತ ಸ್ಪರ್ಧೆಯಲ್ಲಿ ಭಾರತದ ಅನ್ನು ರಾಣಿ ೬೨.೫೯ ಮೀಟರ್ ಜಾವಲೆನ್ ಎಸೆಯುವುದರೊಂದಿಗೆ ಚಿನ್ನದ ಪದಕ ಗೆದ್ದಿದ್ದಾರೆ. ಅನ್ನು ರಾಣಿ ತನ್ನ ಮೊದಲ ಪ್ರಯತ್ನದಲ್ಲಿ ೬೦.೯೬ ಮೀಟರ್ ಎಸೆದು, ತಮ್ಮ ಎರಡನೇ ಪ್ರಯತ್ನದಲ್ಲಿ ೬೨.೫೯ ಮೀಟರ್ ಎಸೆದರು.  ಟರ್ಕಿಯ ಎಡಾ ಟಗ್ಸುಜ್ ೫೮.೩೬ ಮೀಟರ್ ಎಸೆಯುವ ಮೂಲಕ ಬೆಳ್ಳಿ ಗೆದ್ದರೆ, ಆಸ್ಟ್ರೇಲಿಯಾದ ಲಿಯಾನಾ ಡೇವಿಡ್ಸನ್ ೫೮.೧೪ ಮೀಟರ್‌ಗಳೊಂದಿಗೆ ಕಂಚಿನ ಪದಕ ಗೆದ್ದರು. ಮುಂದಿನ ತಿಂಗಳು ಟೋಕಿಯೊದಲ್ಲಿ ನಡೆಯಲಿರುವ ೨೦೨೫ರ ವಿಶ್ವ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್‌ಗೆ ೬೪ ಮೀಟರ್ ಅರ್ಹತಾ ಅಂಕವನ್ನು ತಲುಪುವ ಗುರಿಯನ್ನು ಅವರು ಈಗ ಹೊಂದಿದ್ದಾರೆ.ಇನ್ನೊಂದೆಡೆ, ಮಹಿಳೆಯರ ೮೦೦ ಮೀಟರ್ ಓಟ ಸ್ಪರ್ಧೆಯಲ್ಲಿ ಭಾರತದ ಪೂಜಾ ಎರಡು ನಿಮಿಷ, ಎರಡು ಪಾಯಿಂಟ್ ಒಂಬತ್ತು ಐದು ಸೆಕೆಂಡುಗಳಲ್ಲಿ ಗುರಿ ತಲುಪುವುದರೊಂದಿಗೆ ಮೂರನೇ ಸ್ಥಾನ ಪಡೆದರು. ಮಹಿಳೆಯರ ೪೦೦ ಮೀಟರ್ ಓಟ ಸ್ಪರ್ಧೆಯಲ್ಲಿ ಜಿಸ್ನಾ ಮ್ಯಾಥ್ಯೂ ಐವತ್ನಾಲ್ಕು ಪಾಯಿಂಟ್ ಒಂದು ಎರಡು ಸೆಕೆಂಡುಗಳಲ್ಲಿ ಗುರಿ ತಲುಪಿ ಆರನೇ ಸ್ಥಾನ ಪಡೆದರು.

><><><><><><><><><

ಚೀನಾದ ಚೆಂಗ್ಡುವಿನಲ್ಲಿ ಇಂದಿನಿಂದ ಪ್ರಾರಂಭವಾಗಿ ಇದೇ ೧೭ ರವರೆಗೆ ನಡೆಯಲಿರುವ ವಿಶ್ವ ಕ್ರೀಡಾಕೂಟ ೨೦೨೫ ರಲ್ಲಿ ಭಾರತದ ೧೮ ಸದಸ್ಯರ  ತಂಡವು ಸ್ಪರ್ಧಿಸಲಿದೆ.೧೯೮೧ ರಿಂದ ಪ್ರತಿ ನಾಲ್ಕು ವರ್ಷಗಳಿಗೊಮ್ಮೆ ನಡೆಯುವ ವಿಶ್ವ ಕ್ರೀಡಾಕೂಟವು ಒಲಿಂಪಿಕ್ ಕ್ರೀಡಾಕೂಟದಲ್ಲಿ ಸೇರಿಸದ ಕ್ರೀಡೆಗಳನ್ನು ಒಳಗೊಂಡಿರುತ್ತದೆ. ಈ ವರ್ಷದ ಆವೃತ್ತಿಯು ೩೪ ಕ್ರೀಡೆಗಳು ಮತ್ತು ೬೦ ವಿಭಾಗಗಳಲ್ಲಿ ೨೫೩ ಪದಕ ಸ್ಪರ್ಧೆಗಳನ್ನು ಒಳಗೊಂಡಿದೆ.೧೯೮೧ ರಲ್ಲಿ ಉದ್ಘಾಟನಾ ಆವೃತ್ತಿಯಿಂದ ಭಾರತ ವಿಶ್ವ ಕ್ರೀಡಾಕೂಟದಲ್ಲಿ ಭಾಗವಹಿಸುತ್ತಿದೆ ಮತ್ತು ಇಲ್ಲಿಯವರೆಗೆ ಒಂದು ಚಿನ್ನ, ಒಂದು ಬೆಳ್ಳಿ ಮತ್ತು ಮೂರು ಕಂಚು ಸೇರಿದಂತೆ ಒಟ್ಟು ಐದು ಪದಕಗಳನ್ನು ಗೆದ್ದಿದೆ. ದೇಶದ ಏಕೈಕ ಚಿನ್ನದ ಪದಕ ೨೦೧೩ ರಲ್ಲಿ ಆದಿತ್ಯ ಮೆಹ್ತಾ ಬಿಲಿಯರ್ಡ್ಸ್‌ನಲ್ಲಿ ಪಡೆದಿದ್ದರು.ಈ ಬಾರಿ ಭಾರತ ಬಿಲ್ಲುಗಾರಿಕೆ, ಬಿಲಿಯರ್ಡ್ಸ್, ರೋಲರ್ ಸ್ಕೇಟಿಂಗ್, ವುಶು ಮತ್ತು ರಾಕೆಟ್‌ಬಾಲ್ ಒಟ್ಟು ಐದು ಕ್ರೀಡೆಗಳಲ್ಲಿ ಸ್ಪರ್ಧಿಸಲಿದೆ.

><><><><><><><><